ದಿನಾಂಕ: ಫೆಬ್ರವರಿ ೦೪, ೨೦೧೪

<u>ಎಎಪಿ– ಆವೇಗ ಮತ್ತು ರೂಢಿಗತ ಅಸತ್ಯ ನುಡಿಯುವವರ ಪಕ್ಷ</u>

–ಅರುಣ್ ಜೇಟ್ಲಿ

ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)

ನಿನ್ನೆ, ಅನಗತ್ಯ ವಿವಾದ ಸೃಷ್ಟಿಸಲು ನರೇಂದ್ರ ಮೋದಿ ಅವರ ಹೆಸರಿನೊಂದಿಗ ನನ್ನ ಹೆಸರನ್ನು ಯಾವುದೇ ಸಾಕ್ಷಾಧಾರಗಳಿಲ್ಲದೆ ಹಳಿಯಲು ಆಮ್ ಆದ್ಮಿ ಪಾರ್ಟಿ ಶಾಸಕರು ನೀಡಿದ್ದ ಬೇಜವಾಬ್ದಾರಿಯ ಹೇಳಿಕೆಯನ್ನು ನಾನು ತಳ್ಳಿಹಾಕಿದ್ದೇನೆ. ಇಂದು, ಎಎಪಿ ಕಪೋಲಕಲ್ಪಿತ ಆರೋಪಗಳ ಹಿನ್ನಲೆಯಲ್ಲಿ ನನ್ನ ನಿವಾಸದ ಮುಂದೆ ಪ್ರತಿಭಟನೆ ಏರ್ಪಡಿಸಲು ಅವರು ನಿರ್ಧರಿಸಿದ್ದಾರೆ. ಎಎಪಿ ಆವೇಗ ಮತ್ತು ರೂಢಿಗತ ಅಸತ್ಯ ನುಡಿಯುವ ಪಕ್ಷವೆಂದು ನನಗೆ ಮನವರಿಕೆಯಾಗಿದೆ. ಅಸತ್ಯವನ್ನು ಕಲ್ಪಿಸಿದ ನಂತರ ಅದನ್ನೇ ಸತ್ಯವೆಂದು ಮನವರಿಕೆ ಮಾಡಿಕೊಳ್ಳುವ ರೂಢಿ ಬೆಳೆಸಿಕೊಂಡಿದ್ದಾರೆ.

ಮದನ್‌ಲಾಲ್ ಎಂಬ ಹೆಸರಿನ ಶಾಸಕರು ನೀಡಿದ ಹೇಳಿಕೆಯನ್ನು ಪರಿಗಣಿಸೋಣ.

- ಮದನ್‌ಲಾಲ್ ಎಂಬ ಶಾಸಕರು ನರೇಂದ್ರ ಮೋದಿ ಅವರಿಗಾಗಲಿ, ನನಗಾಗಲಿ ಪರಿಚಯವಿಲ್ಲ.
- ನನ್ನನ್ನು ಬೇಟಿ ಮಾಡುವಂತೆ ಡಿಸೆಂಬರ್ ೭, ೨೦೧೩ರಂದು ಅವರಿಗೆ ಕರೆ ಮಾಡಲಾಯಿತು ಎಂದು ಅವರು ಹೇಳಿಕೆ ನೀಡಿದ್ದಾರೆ.
- ಅವರಿಗೆ ಕರೆ ಮಾಡಿದ ವ್ಯಕ್ತಿಯ ಹೆಸರು ಗೊತ್ತಿಲ್ಲವೆಂದಿದ್ದಾರೆ. ಅವರಿಗೆ ಕರೆ ಮಾಡಲಾದ ಸಂಖ್ಯೆಯೂ ಗೊತ್ತಿಲ್ಲವೆಂದಿದ್ದಾರೆ. ತಮ್ಮ ಸಂಚಾರಿ ದೂರವಾಣಿ ಯಂತ್ರದ ಕರೆ ದಾಖಲಾತಿ ಸೂಚಿಯನ್ನು ಪರಿಶೀಲಿಸಿ ಕರೆ ಬಂದ ಸಂಖ್ಯೆಯನ್ನು ಪತ್ತೆಹಚ್ಚುವ ಕೆಲಸವನ್ನೂ ಸಹ ಅವರು ಮಾಡಿಲ್ಲ.
- ಡಿಸೆಂಬರ್ ೭, ೨೦೧೩ರಂದು ದೆಹಲಿ ಚುನಾವಣೆಗಳ ಫಲಿತಾಂಶ ಬಂದಿರಲಿಲ್ಲ. ಮದನ್ ಲಾಲ್ ಶಾಸಕರಾಗಿರಲಿಲ್ಲ. ಅವರು ಶಾಸಕರಾಗಬಹುದು ಎಂಬ ಊಹೆಯನ್ನೂ ದೆಹಲಿ ಜನತೆ ಮಾಡಿರಲಿಲ್ಲ ಅಥವಾ ಅವರ ಪಕ್ಷಕ್ಕೆ ಅಗತ್ಯ ಸ್ಥಾನಗಳು ಲಭಿಸಲಿವೆ ಎಂಬ ಮುನ್ಸೂಚನೆಯೂ ಇರಲಿಲ್ಲ. ಶಾಸಕರಾಗಿ ಆಯ್ಕೆ ಆಗುವ ಮುನ್ನವೇ ಅವರನ್ನು ಯಾರೆ ಆಗಲಿ ಸಂಪರ್ಕಿಸುವ ಅಗೋಚರವಾದ ಅಗತ್ಯವಾದರು ಏನಿತ್ತು.
- ಗುಜರಾತಿನಿಂದ ಬಂದ ಕೆಲವರು ೧೦ ರಿಂದ ೧೨ ದಿವಸಗಳ ಹಿಂದೆ ತಮಗೆ ವ್ಯಾಪಕ ಲಂಚ ನೀಡುವ ಆಮಿಷ ಒಡ್ಡಿದ್ದರು ಎಂದೂ ಸಹ ಅವರು ವಾದಿಸಿದ್ದಾರೆ.
- ಅವರನ್ನು ಸಂಪರ್ಕಿಸಿದ ವ್ಯಕ್ತಿಯ ಹೆಸರು ಅಥವಾ ಅವರ ಸ್ಥಾನಮಾನ ಅಥವಾ ಹುದ್ದೆಯ ಮಾಹಿತಿ ಅವರಿಗಿಲ್ಲ.
- ಲಂಚ ಸ್ವೀಕರಿಸಿ, ಲಂಚ ನೀಡಿದವರನ್ನು ಸೆರೆ ಹಿಡಿಯಬೇಕು ಎಂಬ ಅವರ ಪಕ್ಷದ ಸೂಚನೆಯನ್ನು ಅವರು ಪಾಲಿಸಲಿಲ್ಲ.

- ೧೦ ದಿವಸಗಳ ವರೆಗು ಮೌನವಾಗಿ ಇರಲು ನಿರ್ಧರಿಸಿದರು
- ಮದನ್ ಲಾಲ್ ಅವರ ಪತ್ರಿಕಾ ಗೋಷ್ಠಿಗೆ ಒಂದು ತಾಸು ಮುನ್ನ ಎಐಸಿಸಿ ಪ್ರಧಾನ ಕಾರ್ಯದರ್ಶಿ ಶಕೀಲ್ ಅಹಮದ್ ಇದೇ ಆರೋಪಗಳನ್ನು ಮಾಡಿರುವುದು ಆಶ್ಚರ್ಯ ಮೂಡಿಸುತ್ತದೆ.

ಆರೋಪಗಳು ನಿರರ್ಥಕವೆಂದು ಗೋಚರಿಸುತ್ತದೆ. ವಾಸ್ತವಿಕತೆ ಸ್ಪಷ್ಟವಾಗಿದೆ. ಆದರೂ ಎಎಪಿ ಅಸತ್ಯವನ್ನು ಸೃಷ್ಟಿ ಮಾಡುವಂತೆ ಕಾಣುತ್ತಿದೆ, ಅದನ್ನೇ ಸತ್ಯವೆಂದು ನಂಬುತ್ತಿದೆ ಹಾಗೂ ನಿರರ್ಥಕ ಸುಳ್ಳನ್ನೇ ಮುಂದುವರಿಸುತ್ತಿದೆ.

*****